# ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ

ಸಂಖ್ಯೆ:ಕೆಎಟಿ/ಸಿಬ್ಬಂದಿ(1)/ಕೆಆರ್‌ಐ–ಆಕ್ಟ್.2000/27/2001 6ನೇ ಮತ್ತು 7ನೇ ಮಹಡಿ, ಕಂದಾಯ ಭವನ,

ಕೆಂಪೇಗೌಡ ರಸ್ತೆ, ಬೆಂಗಳೂರು – 560 009.

ದಿನಾಂಕ: 13.11.2019

## ಅಧಿಸೂಚನೆ

**ವಿಷಯ:– 2005ರ ಮಾಹಿತಿ ಹಕ್ಕು ಕಾಯ್ದೆ (2005ರ ಕೇಂದ್ರ ಕಾಯ್ದೆ ಸಂಖ್ಯೆ.22) ಯ ಪರಿಚ್ಛೇದ 5(1)ರ ಅನ್ವಯ ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನೇಮಿಸುವ ಕುರಿತು.**

–0–0–0–

2005ರ ಮಾಹಿತಿ ಹಕ್ಕು ಕಾಯ್ದೆ (2005ರ ಕೇಂದ್ರ ಕಾಯ್ದೆ ಸಂಖ್ಯೆ.22) ಯ ಪರಿಚ್ಛೇದ 5(1) ರಂತೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಬೆಳಗಾವಿ ಪೀಠದ ಉಪ ವಿಲೇಖನಾಧಿಕಾರಿಗಳು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಳಗಾವಿ ಪೀಠ, ಬೆಳಗಾವಿ, ಇವರನ್ನು ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ಮತ್ತು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಕಲಬುರಗಿ ಪೀಠದ ಉಪ ವಿಲೇಖನಾಧಿಕಾರಿಗಳು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಲಬುರಗಿ ಪೀಠ, ಕಲಬುರಗಿ, ಇವರನ್ನು ರಾಜ್ಯ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ನೇಮಕ ಮಾಡಲಾಗಿದೆ. ಮೇಲೆ ತಿಳಿಸಲಾದ ಪರಿಚ್ಛೇದ 5(1) ರಡಿಯಲ್ಲಿ ಅಯಾ ಪೀಠಗಳಿಗೆ ಸಲ್ಲಿಸಲಾಗುವ ಅರ್ಜಿಗಳನ್ನು ಕಾನೂನಿಗನುಸಾರವಾಗಿ ಮಾಹಿತಿಯನ್ನು ಒದಗಿಸುವ ಅಥವಾ ತಿರಸ್ಕರಿಸುವ ಮೂಲಕ ವಿಲೇವಾರಿ ಮಾಡುವ ಅಧಿಕಾರವನ್ನು ಅವರು ಹೊಂದಿರುತ್ತಾರೆ.

ಸಾರ್ವಜನಿಕರಿಂದ ಕೋರಲಾದ ಮಾಹಿತಿಯು ತಿರಸ್ಕೃತವಾದ ಸಂದರ್ಭದಲ್ಲಿ ಅಂತಹ ಅರ್ಜಿದಾರರು ಪರಿಚ್ಛೇದ 19ರನ್ವಯ ನಿರ್ದಿಷ್ಟ ಪಡಿಸಲಾದ ಸಮಯದೊಳಗೆ ವಿಲೇಖನಾಧಿಕಾರಿಗಳು, ಪ್ರಧಾನ ಪೀಠ, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, 7ನೇ ಮಹಡಿ, ಕಂದಾಯ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು–09, ರವರಿಗೆ ಮೇಲ್ಮನವಿಯನ್ನು ಸಲ್ಲಿಸಲು ಹಕ್ಕುಳ್ಳವರಾಗಿರುತ್ತಾರೆ.

2005ರ ಮಾಹಿತಿ ಹಕ್ಕು ಕಾಯ್ದೆ, ಪರಿಚ್ಛೇದ 19 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮಾನ್ಯ ವಿಲೇಖನಾಧಿಕಾರಿಗಳು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು, ಇವರನ್ನು **"ಮೇಲ್ಮನವಿ ಪ್ರಾಧಿಕಾರ"** ಎಂದು ನೇಮಕ ಮಾಡಲಾಗಿದೆ.

**'ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ'**

13/11/19

**ವಿಲೇಖನಾಧಿಕಾರಿಗಳು**
**ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ,**
**ಬೆಂಗಳೂರು – 09.**

13/11

**ಗೆ:–**

**ಸಂಕಲನಾಧಿಕಾರಿಗಳು, ಮುದ್ರಣ ಮತ್ತು ಪ್ರಕಾಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಕೆಂಗೇರಿ, ಬೆಂಗಳೂರು – ಸದರಿ ಮಾಹಿತಿಯನ್ನು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ ನೂರು (100) ಪ್ರತಿಗಳನ್ನು ಈ ಕಛೇರಿಗೆ ಕಳುಹಿಸಿ ಕೊಡುವಂತೆ ಕೋರಲಾಗಿದೆ.**

. . . . .2/–

ಇವರಿಗೆ:-

1. ವಿಲೇಖನಾಧಿಕಾರಿಗಳು, ಕ.ರಾ.ಆ.ನ್ಯಾಮಂ., ಬೆಂಗಳೂರು.
2. ಉಪ ವಿಲೇಖನಾಧಿಕಾರಿಗಳು, ಕ.ರಾ.ಆ.ನ್ಯಾಮಂ., ಬೆಳಗಾವಿ ಮತ್ತು ಕಲಬುರಗಿ ಪೀಠ.
3. ಸಹಾಯಕ ವಿಲೇಖನಾಧಿಕಾರಿಗಳು, ಕ.ರಾ.ಆ.ನ್ಯಾಮಂ., ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು (ಸೇವಾ ನಿಯಮಗಳು), ಸಿ.ಆ.ಸು.ಇ., ವಿಧಾನ ಸೌಧ, ಬೆಂಗಳೂರು.
5. ಕ.ರಾ.ಆ.ನ್ಯಾಯಮಂಡಳಿಯ ಜಾಲತಾಣ.
6. ಸೂಚನಾ ಫಲಕ, ಕ.ರಾ.ಆ.ನ್ಯಾಮಂ., ಬೆಂಗಳೂರು.
7. ಬಿಡಿ ಪ್ರತಿ.

*ಎಂಆರ್